ಕುರಿಗೂಡನ್ನು ಒಪ್ಪ ಮಾಡುತ್ತಿದ್ದ. ಇದ್ದಕ್ಕಿದ್ದಂತೆ ಯಾರೋ ಹೊರಗಡೆ ಬಂದು ನಿಂತಂತಾಯಿತು. ಬೆಳಕು ಅವನ ಬೆನ್ನಿಗೆ ಬೀಳುತ್ತಿದ್ದರಿಂದ ನಿಂತವರು ನೆರಳಿನಂತೆ ಕಂಡರು. ನಿಂತವರು ಯಾರೆಂದು ಸಣ್ಣತಿಮ್ಮಯ್ಯನಿಗೆ ತಿಳಿಯಲಿಲ್ಲ!

'ಯಾರು?' ಎಂದ.

'ನಾನು ಅಜ್ಜಪ್ಪನಹಟ್ಟಿ ಈರಪ್ಪ' ಎಂದಿತು ನೆರಳು.

'ಈರಪ್ಪ' ಎನ್ನುವ ಹೆಸರು ಕೇಳುತ್ತಿದ್ದ ಹಾಗೆ ಸಣ್ಣತಿಮ್ಮಯ್ಯನ ಸೊಂಟ ನೆಟ್ಟಗಾಯಿತು. ಕೈಯಲ್ಲಿ ಬಂದ್ರೆಸೊಪ್ಪಿನ ಪೊರಕೆ ಹಿಡಿದೇ ಹೊರಬಂದ.

'ಏನು ಬಂದಿದ್ದು ಈರಪ್ಪ' ಎಂದು ಕೇಳಿದ. ಅವನ ಮಾತುಗಳಲ್ಲಿ ಯಾವುದೇ ಕೊಂಕು, ಅಸಹನೆ ಇರಲಿಲ್ಲ.

'ನಮ್ಮದೊಂದು ಪರಮ ನಿಮ್ಮ ಮಂದೆ ಜೊತೆ ಬಂದೈತಾ ಅಂತ ಕೇಳೋಕೆ ಬಂದೆ!' ಎಂದ. ಅವನ ಮಾತುಗಳು ಯಾವ ಬಿಂಕ, ಬಿಗುಮಾನವಿಲ್ಲದೆ ಮಂಜುಗಡ್ಡೆಯಂತೆ ತಣ್ಣಗಿತ್ತು. ಅಷ್ಟರಲ್ಲಿ ಈರಪ್ಪನ ಕಣ್ಣುಗಳು ರೊಪ್ಪದ ನೆಲದ ಮೇಲೆ ಹರಿದಾಡಿವು. ಅಲ್ಲಿದ್ದ ಮಾಂಸದ ಕಮಟುವಾಸನೆ, ಬದಿಯಲ್ಲಿ ಹೂಡಿದ್ದ ಗುಂಡುಕಲ್ಲಿನ ಒಲೆ, ಬೂದಿ, ಮುದುರಿ ಎಸೆದ ಅಡಕೆಪಟ್ಟೆ, ನೆಲದ ಮೇಲೆ ಫಳಫಳ ಹೊಳೆಯುತ್ತಾ ಮಲಗಿದ್ದ ಚೂರಿ, ಇವನ್ನೆಲ್ಲಾ ನೋಡಿದ ಮೇಲೆ ಅವನಿಗೆ ಸಣ್ಣತಿಮ್ಮಯ್ಯ ಮತ್ತು ಅವನ ಪಟಾಲಂ ನಮ್ಮ ಪರಮವನ್ನು ಕುಯ್ದು ತಿಂದಿದ್ದಾರೆ ಅನ್ನಿಸಿತು. ಅವನ ಮನಸ್ಸೂ ಆ ಮಾತನ್ನು ಎರಡಿಲ್ಲದೆ ಒಪ್ಪಿಕೊಂಡಿತು. ಅವನಿಗೆ ತಡೆದುಕೊಳ್ಳಲಾಗಲಿಲ್ಲ! ತಲೆಯೆತ್ತಿ 'ತಿಂದೇ ಬಿಟ್ಟರಾ ನಮ್ಮ ಮರಿನಾ!' ಎಂದು ಸಂಕಟ ಬೆರೆತ ಮಾತಿನಿಂದ ಕೇಳಿದ. ಉದ್ವೇಗ, ಆವೇಶಗಳಿಲ್ಲದ ಅವನ ಮಾತುಗಳು ಹಿಂದೆ ತಾನು ಮಾಡಿದ ತಪ್ಪಿಗೆ ದೊರೆತ ಶಿಕ್ಷೆ ಎನ್ನುವ ಹಾಗಿತ್ತು. ವಲ್ಲಿಯಿಂದ ಮುಖ ಒರೆಸಿಕೊಂಡು, ತಲೆತಗ್ಗಿಸಿಕೊಂಡು ಹೊರಡಲು ಮುಂದಾದ.

'ಈರಪ್ಪಾ ವಸಿ ನಿಲ್ಲು' ಎಂದು ಹೇಳಿದ ಸಣ್ಣತಿಮ್ಮಯ್ಯ, ತನ್ನ ಕೈಯಲ್ಲಿದ್ದ ಬಂದ್ರೆಸೊಪ್ಪಿನ ಪೊರಕೆಯನ್ನು ಕೆಳಗಿಟ್ಟು, ಗೂಡಿಗೆ ಹೋಗಿ ಕುರಿಮರಿಯನ್ನು ಎಳೆದುತಂದು ಈರಪ್ಪನ ಮುಂದೆ ನಿಲ್ಲಿಸಿ 'ಇದೇನಾ ನಿಮ್ಮ ಪರಮ' ಎಂದು ಕೇಳಿದ. ಅವನ ಮಾತುಗಳಲ್ಲಿ ಯಾವುದೇ ಕುಹಕವಾಗಲಿ, ದ್ವೇಷದ ಎಳೆಯಾಗಲಿ ಇರಲಿಲ್ಲ. ಕುರಿಮರಿ ತಲೆಯೆತ್ತಿ ಒಮ್ಮೆ ಸಣ್ಣತಿಮ್ಮಯ್ಯನನ್ನು ಕಣ್ಣರಳಿಸಿ ನೋಡಿತು. 'ಈ ಗೊಲ್ಲಗೌಡ ಎಂದಿಗೂ ಎಲ್ಲರಂತೆ ಮಾಡೋನಲ್ಲ! ತಿಳ್ಕೊ... ನಾನೂ ನಿನ್ನಂಗೆ ಕುರಿ ಆಳೋನೆ. ಹೊಡ್ಕೊಂಡು ಹೋಗು ನಿನ್ನ ಮರೀನಾ' ಎಂದು ಈರಪ್ಪನಿಗೆ ಹೇಳಿದ. ಈರಪ್ಪನ ಮೈ ಮೆಲ್ಲಗೆ ನಡುಗುತ್ತಿತ್ತು. ತನ್ನೆದುರು ನಿಂತ ಕುರಿಮರಿಯನ್ನು ನೋಡಿ ಮಾತುಗಳು ಕರಗಿ ಹೋದವು. ಇನ್ನು ಉಳಿದಿದ್ದು ಮೌನ ಮಾತ್ರ. ಸಂಕಟ ತುಂಬಿದ ತನ್ನ ಆತ್ಮಕ್ಕೆ ಅಂಟಿದ್ದ ಮಸಿ ಅವನಿಗೆ ಗೋಚರಿಸಿತು. ನಾಚಿಕೆಯಿಂದ ತಲೆತಗ್ಗಿಸಿದ. ಕರುಣೆಯ ಕೊನೆಯ ಕ್ಷಣಗಳು ಅವನ ಕಣ್ಣೀರನ್ನು ತಂಪಾಗಿಸಿದವು. ಅವನ ಮುಖದಲ್ಲಿ ಕಾಠಿಣ್ಯತೆ ಕಾಣಲಿಲ್ಲ. ಕುರಿಮರಿಯನ್ನು ತಬ್ಬಿಕೊಂಡು ತನ್ನ ಹಟ್ಟಿಕಡೆಗೆ ಹೆಜ್ಜೆ ಹಾಕಿದ. ಹಾಗೆ ಹೋಗುವಾಗಲೂ ಕುರಿಮರಿ ಸಣ್ಣತಿಮ್ಮಯ್ಯನನ್ನೇ ನೋಡುತ್ತಿತ್ತು. ಸಣ್ಣತಿಮ್ಮಯ್ಯನ ಕಣ್ಣುಗಳೂ ಕುರಿಮರಿಯ ಕಣ್ಣುಗಳನ್ನೇ ನೋಡುತ್ತಿದ್ದವು.

* * *

ಸಂಜೆಯ ಕೊನೆಯ ಕಿರಣಗಳು ಹೊಂಗೆಮರದ ಕೆಳಗೆ ಕುಳಿತಿದ್ದ ಸಣ್ಣತಿಮ್ಮಯ್ಯನ ಮುಖದ ಮೇಲೆ ಬೀಳುತ್ತಿತ್ತು. ಕಾಲ ಎಷ್ಟು ಬೇಗ ಕಳೆದುಹೋಗುತ್ತದೆ! ಕೊನೆಯಿಲ್ಲದೆ ಸಾಗುತ್ತಿರುವ ಗಳಿಗೆಗಳಲ್ಲಿ ಸಣ್ಣತಿಮ್ಮಯ್ಯ ಈಗ ಜೀವಿಸುತ್ತಿದ್ದ. ಅದೇ ಹಟ್ಟಿ, ಅಪ್ಪ ಗಿರಿಗೌಡನ ಗುಡ್ಡೆ, ಅದೇ ಹೊಂಗೆಮರದ ನೆರಳು. ಉರುಳುತ್ತಿದ್ದ ಪ್ರತಿಕ್ಷಣವೂ ಅವನ ಮುಪ್ಪನ್ನು ಹೆಚ್ಚಿಸುತ್ತಿತ್ತು. ಯಾರೋ ಬಂದು ತನ್ನ ಮುಂದೆ ನಿಂತಂತಾಯಿತು. ಮಬ್ಬಾದ ಕಣ್ಣುಗಳಿಗೆ ನಿಂತ ಮಾನವಾಕೃತಿ ಯಾರೆಂದು ತಿಳಿಯಲಿಲ್ಲ!

'ಯಾರದು?' ಎಂದು ಅವನ ನಡುಗುವ ಧ್ವನಿ ಕೇಳಿತು.

'ನಾನು ಕಣಪ್ಪೊ' ಎಂದಿತು ನಿಂತಿದ್ದ ಆಕೃತಿ.

'ಯಾರು, ಶಿವಣ್ಣನಾ. ಏಟೊತ್ತಿಗೆ ಬಂದೆ! ಎಲ್ಲಿ.... ಮಾವಿನಹಣ್ಣು ತಂದೆನೊ ಮಗಾ!'

●